ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - 560018.

कर्नाटक-संस्कृत-विश्वविद्यालयः
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु - ५६००१८.

## ದಿ: 08.08.2024ರಂದು ನಡೆದ ಪ್ರಶಾಸನ ಸಮಿತಿಯ ತುರ್ತು ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿಯ ತುರ್ತು ಸಭೆಯನ್ನು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 08-08-2024 ಗುರುವಾರ ಬೆಳಿಗ್ಗೆ 10.30 ಗಂಟೆಗೆ ಆನ್ಲೈನ್ ಮೂಲಕ ಕರೆಯಲಾಗಿತ್ತು.

### ಆನ್ಲೈನ್ ಸಭೆಗೆ ಹಾಜರಾದವರು:

1. ಡಾ. ಅಹಲ್ಯಾ ಎಸ್., ಕುಲಪತಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ – ಅಧ್ಯಕ್ಷರು
2. ಪ್ರೊ. ರಜನೀಶ ಕುಮಾರ ಮಿಶ್ರ, ಸಂಸ್ಕೃತ ಮತ್ತು ಇಂಡಿಕ್ ಅಧ್ಯಯನ ವಿಭಾಗ, ಜವಾಹರಲಾಲ ನೆಹರು ವಿಶ್ವವಿದ್ಯಾಲಯ, ನವದೆಹಲಿ – 110067 – ಸದಸ್ಯರು
3. ಡಾ. ಆರ್. ಶ್ರೀಧರ ಶಾಸ್ತ್ರಿ ಸೂರಿ, ಪ್ರಾಧ್ಯಾಪಕರು(ನಿ), ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾ ಮಠ, ತುಮಕೂರು – ಸದಸ್ಯರು
4. ಶ್ರೀಮತಿ ಸಮತಾ ಹೊಸಪೇಟೆ, "ಬಾಲಾಜಿ", ಕುವೆಂಪು ನಗರ ಬಸ್ ನಿಲ್ದಾಣದ ಎದುರುಗಡೆ, ಹನುಮಾನ್ ನಗರ, ಬೆಳಗಾವಿ – 19 – ಸದಸ್ಯರು
5. ಶ್ರೀ ವಿಶ್ವನಾಥ ಪಿ. ಹಿರೇಮಠ(ಕ.ಆ.ಸೇ), ಕುಲಸಚಿವರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ. – ಸದಸ್ಯ ಕಾರ್ಯದರ್ಶಿಗಳು

### ಆನ್ಲೈನ್ ಸಭೆಗೆ ಗೈರು ಹಾಜರಾದವರು:

1. ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ – ಸದಸ್ಯರು
2. ಅಪರ ಮುಖ್ಯ ಕಾರ್ಯದರ್ಶಿಗಳು, ಹಣಕಾಸು ಇಲಾಖೆ – ಸದಸ್ಯರು
3. ಮಹಾ ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ – ಸದಸ್ಯರು
4. ಉಪ ಕಾರ್ಯದರ್ಶಿಗಳು, ಕಂದಾಯ ಇಲಾಖೆ(ಮುಜರಾಯಿ) – ಸದಸ್ಯರು
5. ಶ್ರೀ **ಪ್ರದೀಪ್ ಈಶ್ವರ್**, ಮಾನ್ಯ ವಿಧಾನಸಭಾ ಸದಸ್ಯರು, ಚಿಕ್ಕಬಳ್ಳಾಪುರ ವಿಧಾನ ಸಭಾ ಕ್ಷೇತ್ರ, ನಂ-516, ಪೆರೇಸಂದ್ರ ಗ್ರಾಮ, ಚಿಕ್ಕಬಳ್ಳಾಪುರ ತಾಲ್ಲೂಕು, ಚಿಕ್ಕಬಳ್ಳಾಪುರ- 562104. – ಸದಸ್ಯರು

ಸಭೆಯ ಆರಂಭದಲ್ಲಿ ಕುಲಸಚಿವರು ಪ್ರಾಸ್ತಾವಿಕವಾಗಿ ಮಾತನಾಡಿ ಎಲ್ಲರನ್ನೂ ಸ್ವಾಗತಿಸಿದರು. ನಂತರ ಕಾರ್ಯಸೂಚಿಯಂತೆ ವಿಷಯವಾರು ಚರ್ಚಿಸಿ ನಿರ್ಣಯ ಕೈಗೊಳ್ಳಲಾಯಿತು.

| ವಿ.ಸಂ | ವಿಷಯ ಮತ್ತು ಟಿಪ್ಪಣಿ |
|---|---|
| ವಿಷಯ: 01. | ವಿದ್ವಾನ್ ಪ್ರಕಾಶ್ ಆರ್ ಪಾಗೋಜಿ, ಉಪಕುಲಸಚಿವರು ಹಾಗೂ ವಿದ್ವಾನ್ ಎಂ ಶಿವಮೂರ್ತಿ, ಶಾಖಾಧಿಕಾರಿ ಇವರುಗಳ ನೇಮಕಾತಿ ಕುರಿತಂತೆ ಶ್ರೀ ಗಂಗಾಧರಪ್ಪ ಹಾಗೂ ಶೈಲಶ್ರೀ ಎಂಬುವವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದ ಪ್ರಕರಣಗಳ ಸಂಖ್ಯೆ WP-28172/2013 ಮತ್ತು WP-21896/2013 ಗಳಿಗೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯದ ಏಕಸದಸ್ಯ ಪೀಠವು ದಿನಾಂಕ: 15.12.2023 ರಂದು |

| | |
|---|---|
| | ತೀರ್ಪನ್ನು ನೀಡಿ ಸದರಿಯವರುಗಳನ್ನು ಸೇವೆಯಿಂದ ಬಿಡುಗಡೆಗೊಳಿಸಿ ಅರ್ಜಿದಾರರು ಒಳಗೊಂಡಂತೆ ಹೊಸದಾಗಿ ನೇಮಕಾತಿ ಪ್ರಕ್ರಿಯೆ ಕೈಗೊಳ್ಳುವಂತೆ ಪ್ರತಿವಾದಿಯಾದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡಿರುತ್ತದೆ.<br>ಸದರಿ ಆದೇಶವನ್ನು ಅನುಷ್ಠಾನಗೊಳಿಸುವಂತೆ ಅರ್ಜಿದಾರರಾದ ಶ್ರೀ ಗಂಗಾಧರಪ್ಪ ಹಾಗೂ ಶೈಲಶ್ರೀ ಇವರುಗಳು ಸರ್ಕಾರಕ್ಕೆ ಹಾಗೂ ವಿಶ್ವವಿದ್ಯಾಲಯಕ್ಕೆ ಮನವಿ ಸಲ್ಲಿಸಿದ್ದರ ಹಿನ್ನೆಲೆಯಲ್ಲಿ ಸದರಿ ಮನವಿಯನ್ನು ಆಧರಿಸಿ ಕರ್ನಾಟಕ ಸರ್ಕಾರವು ದಿನಾಂಕ: 21.12.2023, 29.12.2023, 15.03.2024 ಗಳಂದು ವಿದ್ವಾನ್ ಪ್ರಕಾಶ್ ಆರ್ ಪಾಗೋಜಿ ಹಾಗೂ ವಿದ್ವಾನ್ ಎಂ ಶಿವಮೂರ್ತಿ ಇವರುಗಳನ್ನು ಬಿಡುಗಡೆಗೊಳಿಸಿ ಮಾನ್ಯ ನ್ಯಾಯಾಲಯದ ಆದೇಶದಂತೆ ಕ್ರಮವಹಿಸುವಂತೆ ಸೂಚಿಸಲಾಗಿತ್ತು.<br>ಈ ಮಧ್ಯೆ ಬಾಧಿತರಾದ ವಿದ್ವಾನ್ ಪ್ರಕಾಶ್ ಆರ್ ಪಾಗೋಜಿರವರು ಮಾನ್ಯ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದಲ್ಲಿ ಅಪೀಲು ಸಂಖ್ಯೆ WA – 1590/2023 ಮತ್ತು ವಿದ್ವಾನ್ ಎಂ ಶಿವಮೂರ್ತಿರವರು WA – 1591/2023 ಅಪೀಲುಗಳನ್ನು ಸಲ್ಲಿಸಿ ದಿನಾಂಕ: 15.12.2023ರ ಮಾನ್ಯ ಉಚ್ಚ ನ್ಯಾಯಾಲಯದ ಏಕಸದಸ್ಯ ಪೀಠದ ಆದೇಶಕ್ಕೆ ದಿನಾಂಕ: 26.12.2023 ರಂದು ತಡೆಯಾಜ್ಞೆಗಳನ್ನು ತಂದಿರುತ್ತಾರೆ.<br>ಪ್ರಸ್ತುತ ಸದರಿ ಪ್ರಕರಣಗಳು ಮಾನ್ಯ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ಮುಂದೆ ದಿನಾಂಕ:12.08.2024 ರಂದು ವಿಚಾರಣೆಗೆ ಬರುತ್ತಿರುವ ಹಿನ್ನೆಲೆಯಲ್ಲಿ ಪ್ರಶಾಸನ ಸಮಿತಿಯ ಮುಂದೆ ಮುಂದಿನ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | ಈ ಹಿಂದೆ ಮಾನ್ಯ ಉಚ್ಚ ನ್ಯಾಯಾಲಯದ ಏಕಸದಸ್ಯ ಪೀಠದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು Affidavit ನ್ನು ಸಲ್ಲಿಸುವ ಮೂಲಕ ಸದರಿ ನೇಮಕಾತಿಗಳನ್ನು ಸಮರ್ಥಿಸಿಕೊಂಡಿರುವ ಹಿನ್ನೆಲೆಯಲ್ಲಿ ಪ್ರಸ್ತುತ ವಿಭಾಗೀಯ ಪೀಠದಲ್ಲಿಯೂ ಸಹ ಅದೇ ನಿಲುವನ್ನು ತಳೆಯುವುದು ಸೂಕ್ತವೆಂದು ಪ್ರಶಾಸನ ಸಮಿತಿಯ ಸರ್ವಸದಸ್ಯರು ತೀರ್ಮಾನಿಸಿದರು.<br>ಮುಂದುವರಿದು ಏಕ ಸದಸ್ಯ ಪೀಠವು ನೀಡಿರುವ ಆದೇಶವನ್ನು ಆಧರಿಸಿ ಸರ್ಕಾರದ ಉಲ್ಲೇಖಿತ ಪತ್ರಗಳ ನಿರ್ದೇಶನದಂತೆ ಕ್ರಮವಹಿಸಿದಲ್ಲಿ ಅಂತಹ ಕ್ರಮವು ಮಾನ್ಯ ವಿಭಾಗೀಯ ಪೀಠವು ನೀಡಿರುವ ತಡೆಯಾಜ್ಞೆಗೆ ವ್ಯತಿರಿಕ್ತವಾಗುತ್ತದೆ. **ಹಾಗೂ** *sub judis* ಆಗುವ ಸಂಭವವಿರುವ ಹಿನ್ನೆಲೆಯಲ್ಲಿ ಸದರಿ ಅಂಶಗಳನ್ನು ಸರ್ಕಾರದ ಗಮನಕ್ಕೆ ತಂದು ಪ್ರಸ್ತುತ ಮಾನ್ಯ ಉಚ್ಚನ್ಯಾಯಾಲಯದ ವಿಭಾಗೀಯ ಪೀಠದಲ್ಲಿ ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣದಲ್ಲಿನ ತೀರ್ಮಾನದಂತೆ ಸೂಕ್ತ ಕ್ರಮ ವಹಿಸಬಹುದಾಗಿದೆ ಎಂದು ಸರ್ಕಾರಕ್ಕೆ ಪತ್ರಮುಖೇನ ತಿಳಿಸಲು ಸಮಿತಿಯು ತೀರ್ಮಾನಿಸಿತು. |

ಸದಸ್ಯ ಕಾರ್ಯದರ್ಶಿಗಳು

ಅಧ್ಯಕ್ಷರು